# ಕರ್ನಾಟಕ ಸರ್ಕಾರ

ಸಂ.ಆಇ 217 ಆನಿ/2010

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನಸೌಧ,
ಬೆಂಗಳೂರು, ದಿನಾಂಕ.21-8-2010.

## ಸುತ್ತೋಲೆ

ವಿಷಯ: ತಾಲ್ಲೂಕು ಪಂಚಾಯತ್‌ಗಳ ಆಯವ್ಯಯ ನಿಯಂತ್ರಣ ಮತ್ತು ಅವುಗಳ ವೇತನೇತರ ಬಿಲ್ಲುಗಳಿಗೆ ಮೇಲು ಸಹಿ ಮಾಡುವ ಬಗ್ಗೆ.

ಉಲ್ಲೇಖ: ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯ ಅಧಿಕೃತ ಜ್ಞಾಪನ ಸಂಖ್ಯೆ:ಗ್ರಾಅಪ ಎಎಫ್‌ಎನ್ 2009 ದಿನಾಂಕ:18-01-2010.
ನಿರ್ದೇಶಕರು ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರ ಅರೆಸರ್ಕಾರಿ ಪತ್ರ ಸಂಖ್ಯೆ:DWC/ICD/PRC/93/09-10 ದಿನಾಂಕ:6.3.2010.

****

ತಾಲ್ಲೂಕು ಪಂಚಾಯತ್‌ಗಳಲ್ಲಿ ಆಯವ್ಯಯದಲ್ಲಿ ಹಂಚಿಕೆ ಮಾಡಲ್ಪಟ್ಟ ಅನುದಾನಕ್ಕಿಂತ ವೆಚ್ಚವು ಹೆಚ್ಚು ಆಗಿರುವುದನ್ನು ಗಮನಿಸಿ ಪ್ರಧಾನ ಮಹಾಲೇಖಪಾಲರವರು(ಸಿ ಮತ್ತು ಸಿಎ) ಆಯವ್ಯಯ ನಿಯಂತ್ರಣ ಸಲುವಾಗಿ ಸೂಕ್ತ ನಿರ್ದೇಶನ ಹೊರಡಿಸುವಂತೆ ಕೋರಿರುವ ಮೇರೆಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯಿಂದ ಉಲ್ಲೇಖ (1)ರಲ್ಲಿ ಹೇಳಿರುವ ದಿನಾಂಕ:18.01.2010ರ ಅಧಿಕೃತ ಜ್ಞಾಪನವನ್ನು ಹೊರಡಿಸಲಾಗಿರುತ್ತದೆ. ಈ ಅಧಿಕೃತ ಜ್ಞಾಪನದಲ್ಲಿ ಆಯವ್ಯಯ ನಿಯಂತ್ರಣ ಸಾಧಿಸುವ ದೃಷ್ಟಿಯಿಂದ ತಾಲ್ಲೂಕು ಪಂಚಾಯತ್‌ನಿಂದ ಅನುಮೋದಿಸಲ್ಪಟ್ಟ ತಾಲ್ಲೂಕು ಪಂಚಾಯತ್ ವ್ಯಾಪ್ತಿಯಲ್ಲಿನ ಎಲ್ಲಾ ಇಲಾಖೆಗಳ ಕಾರ್ಯಕ್ರಮಗಳಿಗೆ ಸಂಬಂಧಿಸಿದ ವೇತನೇತರ ಬಿಲ್ಲುಗಳಿಗೆ ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಯ ಮೇಲುಸಹಿ ಪಡೆಯತಕ್ಕದೆಂದು ಸೂಚಿಸಲಾಗಿರುತ್ತದೆ.

ಆದರೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ನಿರ್ದೇಶಕರು, ಸದರಿ ಇಲಾಖೆಯ ತಾಲ್ಲೂಕು ಪಂಚಾಯತ್ ವ್ಯಾಪ್ತಿಗೆ ಬರುವ ಇಲಾಖಾ ಕಾರ್ಯಕ್ರಮಗಳ ಸಮರ್ಪಕ ಅನುಷ್ಠಾನದ ಹಿತದೃಷ್ಟಿಯಿಂದ ಎಲ್ಲಾ ಬಿಲ್ಲುಗಳಿಗೆ ಇಲಾಖೆಯ ಜಿಲ್ಲಾ ಉಪ ನಿರ್ದೇಶಕರುಗಳೇ ಮೇಲು ಸಹಿ ಮಾಡುವಂತೆ ಉಲ್ಲೇಖ(2)ರಲ್ಲಿನ ಅರೆ ಸರ್ಕಾರಿ ಪತ್ರದಲ್ಲಿ ನಿರ್ದೇಶನ ನೀಡಲು ಕೋರಿರುತ್ತಾರೆ. ಈ ಇಲಾಖೆಯ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಏಪ್ರಿಲ್/ಮೇ ತಿಂಗಳುಗಳಲ್ಲಿ ತಾಲ್ಲೂಕು ಪಂಚಾಯತ್‌ಗಳಿಗೆ ಮೇಲುಸಹಿಗಾಗಿ ಸಲ್ಲಿಸಿರುವ ಸಾದಿಲ್ವಾರು ಬಿಲ್ಲುಗಳು ಕೆಲವೊಂದು ತಾಲ್ಲೂಕು ಪಂಚಾಯತ್‌ಗಳಿಂದ ಜುಲೈ ತಿಂಗಳವರೆಗೂ ಮೇಲುಸಹಿಯಾಗದೆ ಬಾಕಿ ಉಳಿದಿರುವ ಪ್ರಕರಣಗಳ ಉದಾಹರಣೆ ನೀಡಿ ಇವರ ಕೋರಿಕೆಗೆ ಸಮರ್ಥನೆಯನ್ನು ನೀಡಿರುತ್ತಾರೆ.

ತಾಲ್ಲೂಕು ಪಂಚಾಯತ್‌ಗಳಲ್ಲಿ ಆಯವ್ಯಯ ನಿಯಂತ್ರಣ ಸಾಧಿಸುವ ದೃಷ್ಟಿಯಿಂದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯು ಹೊರಡಿಸಿರುವ ದಿನಾಂಕ:18.01.2010ರ ಅಧಿಕೃತ ಜ್ಞಾಪನದಲ್ಲಿ ವೇತನೇತರ ಬಿಲ್ಲುಗಳಿಗೆ ತಾಲ್ಲೂಕು ಪಂಚಾಯತ್‌ನ ಕಾರ್ಯನಿರ್ವಹಕಾಧಿಕಾರಿಯ ಮೇಲುಸಹಿ ಪಡೆಯತಕ್ಕದೆಂದು ನೀಡಿರುವ ಸೂಚನೆ ನಿಯಮಾನುಸಾರವಾಗಿರುತ್ತದೆ. ಆದರೆ ತಾಲ್ಲೂಕು ಪಂಚಾಯತ್‌ಗಳಿಂದ ಒಂದು ತಿಂಗಳು ಕಳೆದ ನಂತರವೂ ಬಿಲ್ಲುಗಳನ್ನು ಮೇಲುಸಹಿ ಮಾಡಿ ಅನುಷ್ಠಾನಾಧಿಕಾರಿಗಳಿಗೆ ಹಿಂದಿರುಗಿಸದೇ ಇರುವುದನ್ನು ಗಂಭೀರವಾಗಿ ಪರಿಗಣಿಸಿದೆ. ಇಂತಹ ವಿಳಂಬ ಉಂಟಾಗದಂತೆ ಮಾಡಲು ಈ ಕೆಳಗಿನ ಕ್ರಮಗಳನ್ನು ಪಾಲಿಸಲು ಸೂಚಿಸಿದೆ.

1. ಮೇಲುಸಹಿಗಾಗಿ ಕಳುಹಿಸುವ ಎಲ್ಲಾ ವೇತನೇತರ ಬಿಲ್ಲುಗಳನ್ನು ಅವುಗಳು ತಾಲ್ಲೂಕು ಪಂಚಾಯತ್‌ನಲ್ಲಿ ಸ್ವೀಕೃತವಾದ ದಿನಾಂಕದಿಂದ ಐದು ದಿವಸಗಳ ಒಳಗಾಗಿ ಪರಿಶೀಲಿಸಿ ಮೇಲು ಸಹಿ ಮಾಡಿ ಹಿಂದುರುಗಿಸತಕ್ಕದ್ದು.

2. ವೇತನೇತರ ಬಿಲ್ಲುಗಳಲ್ಲಿ ಯಾವುದಾದರು ನ್ಯೂನತೆಗಳು ಕಂಡುಬಂದಲ್ಲಿ ಆ ನ್ಯೂನತೆಗಳೇನೆಂಬುದನ್ನು ತಿಳಿಸಿ ಅವುಗಳನ್ನು ಸರಿಪಡಿಸಿ ಸಲ್ಲಿಸುವಂತೆ ಸೂಚಿಸಿ ಬಿಲ್ಲುಗಳನ್ನು ಸ್ವೀಕರಿಸಿದ ದಿನಾಂಕದಿಂದ ಐದು ದಿವಸಗಳ ಒಳಗಾಗಿ ಹಿಂದಿರುಗಿಸತಕ್ಕದ್ದು.
3. ವೇತನೇತರ ಬಿಲ್ಲುಗಳನ್ನು ಮೇಲುಸಹಿ ಮಾಡಿ ಕಳುಹಿಸುವಲ್ಲಿ ವಿಳಂಬವಾದಲ್ಲಿ ಇಲಾಖೆಗಳ ನಿರ್ದಿಷ್ಟ ಕಾರ್ಯಕ್ರಮಗಳನ್ನು ನಿಗದಿತ ಅವಧಿಯೊಳಗೆ ಅನುಷ್ಠಾನಗೊಳಿಸುವುದಕ್ಕೆ ಅಡಚಣೆಯಾಗುತ್ತದೆ. ಆದ್ದರಿಂದ ಅಂತಹ ಪ್ರಕರಣಗಳು ವರದಿಯಾದಲ್ಲಿ ತಾಲ್ಲೂಕು ಪಂಚಾಯತ್‌ಗಳ ಕಾರ್ಯನಿರ್ವಾಹಕ ಅಧಿಕಾರಿಗಳನ್ನೇ ಹೊಣೆಗಾರರನ್ನಾಗಿ ಮಾಡಲಾಗುವುದು.
4. ಸಾದಿಲ್ವಾರು ಬಿಲ್ಲುಗಳಿಗೆ/ಡಿ.ಸಿ ಬಿಲ್ಲುಗಳಿಗೆ ಮೇಲುಸಹಿ ಮಾಡುವಂತಹ ನಿಯಂತ್ರಣಾಧಿಕಾರಿಗಳ ಜವಬ್ದಾರಿಗಳೇನೆಂಬುದನ್ನು ಸಾದಿಲ್ವಾರು ವೆಚ್ಚಗಳ ಕೈಪಿಡಿಯ ಸಾಮಾನ್ಯ ನಿಯಮ 22ರಲ್ಲಿ ವಿವರಿಸಲಾಗಿರುತ್ತದೆ. ಆದ್ದರಿಂದ ತಾಲ್ಲೂಕು ಪಂಚಾಯತ್ ಕಛೇರಿಗಳಲ್ಲಿ ಮೇಲುಸಹಿಗಾಗಿ ಸ್ವೀಕರಿಸುವ ಬಿಲ್ಲುಗಳನ್ನು ಈ ನಿಯಮದನ್ವಯ ಪರಿಶೀಲಿಸಿ ಮೇಲುಸಹಿ ಮಾಡಿ ಸಂಬಂಧಿಸಿದ ಅನುಷ್ಠಾನಾಧಿಕಾರಿಗಳಿಗೆ ವಿಳಂಬ ಮಾಡದೆ ಐದು ದಿವಸದೊಳಗೆ ಕಳುಹಿಸತಕ್ಕದ್ದು.

ಮೇಲಿನ ಸೂಚನೆಗಳನ್ನು ತಾಲ್ಲೂಕು ಪಂಚಾಯತ್‌ಗಳಲ್ಲಿ ಕಟ್ಟುನಿಟ್ಟಾಗಿ ಪಾಲಿಸುವುದು.



(ಅಜಯ್ ಸೇಠ್)
ಸರ್ಕಾರದ ಕಾರ್ಯದರ್ಶಿ(ಆ.&ಸಂ.)
ಆರ್ಥಿಕ ಇಲಾಖೆ.

ಪ್ರತಿ:

೧. ಪ್ರಧಾನ ಮಹಾಲೇಖಪಾಲರು (ಸಿ ಮತ್ತು ಸಿ.ಎ), ಕರ್ನಾಟಕ,ಬೆಂಗಳೂರು.
೨. ಉಪ ಮಹಾಲೇಖಪಾಲರು (ಸ್ಥಳೀಯ ಸಂಸ್ಥೆಗಳು), ಕರ್ನಾಟಕ,ಬೆಂಗಳೂರು.
೩. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ.
೪. ಸರ್ಕಾರದ ಕಾರ್ಯದರ್ಶಿಗಳು(ಪಂ.ರಾಜ್),ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ.

೫. ಎಲ್ಲಾ ಇಲಾಖಾ ಮುಖ್ಯಸ್ಥರುಗಳಿಗೆ.

೬. ನಿರ್ದೇಶಕರು ಖಜಾನೆ ಇಲಾಖೆ, ವಿಶ್ವೇಶ್ವರಯ್ಯ ಕೇಂದ್ರ, ಬೆಂಗಳೂರು.

೭. ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು/ಮುಖ್ಯ ಲೆಕ್ಕಾಧಿಕಾರಿಗಳು.

೮. ಎಲ್ಲಾ ಜಿಲ್ಲಾ ಖಜಾನಾಧಿಕಾರಿಗಳು.

೯.ಎಲ್ಲಾ ತಾಲ್ಲೂಕು ಪಂಚಾಯತ್‌ಗಳ ಕಾರ್ಯನಿರ್ವಾಹಕ ಅಧಿಕಾರಿಗಳು.

೧೦. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆರವರ ಆಪ್ತಕಾರ್ಯದರ್ಶಿ.

೧೧. ಸರ್ಕಾರದ ಕಾರ್ಯದರ್ಶಿಗಳು(ಆ.&ಸಂ.) ಆರ್ಥಿಕ ಇಲಾಖೆರವರ ಆಪ್ತ ಕಾರ್ಯದರ್ಶಿ.

೧೨. ಸರ್ಕಾರದ ಕಾರ್ಯದರ್ಶಿಗಳು(ವೆಚ್ಚ) ಆರ್ಥಿಕ ಇಲಾಖೆರವರ ಆಪ್ತ ಕಾರ್ಯದರ್ಶಿ.

೧೩. ವಿಶೇಷಾಧಿಕಾರಿಗಳು(ಜಿ.ಪಂ.) ಆರ್ಥಿಕ ಇಲಾಖೆ

೧೪. ಹೆಚ್ಚುವರಿ ಪ್ರತಿಗಳು.